**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 12.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಡಿ.ಸಿ. ವಕೀಲರಿಂದಃ**

ನನ್ನ ಮಧ್ಯಂತರ ಅರ್ಜಿಯ ಜೊತೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕಃ 06.10.2023 ರ ನೋಂದಾಯಿತ ಮುಂದುವರೆದ ಕ್ರಯದ ಒಪ್ಪಂದ ಕರಾರು ಪತ್ರದ ಆನ್ ಲೈನ್ / ಡಿಜಿಟಲ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-12** ಎಂದು, ದಿನಾಂಕಃ 06.10.2023 ರ ಒಟ್ಟು ಕ್ರಯ ಒಪ್ಪಂದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-13** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-13(ಎ)** ಎಂದು, ಸದರಿ ನಿ.ಪಿ.-13 ಕ್ರಯ ಒಪ್ಪಂದ ಕರಾರು ಪತ್ರಕ್ಕೆ ಸಾಕ್ಷಿಗಳಾಗಿ ರಾಜಣ್ಣ ಹಾಗು ಮಂಜು ಎನ್ನುವವರು ಸಹಿ ಮಾಡಿದ್ದು ಸದರಿ ಪತ್ರವನ್ನು ಪತ್ರ ಬರಹಗಾರರಾದ ಪಿ. ಕೆಂಪರಾಜುರವರು ಬರೆದಿರುತ್ತಾರೆ.

ಆದ್ದರಿಂದ ಆರೋಪಿಯ ವಿರುದ್ಧ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ..

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಸಮಾಯವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**